# ಶ್ರೀಮಾತೆಯವರೊಡನೆ ಮಾತುಕತೆ



**ಸರಯೂ ಬಾಲಾ ದೇವಿ ಅವರ ನೆನಪುಗಳು:**

**(ದಿನಾಂಕ: ೩.೮.೧೯೧೧)**

ಇಂದು ಮುಂಜಾನೆಯೇ ದೀಕ್ಷೆ ಪಡೆಯುವ ಇಚ್ಛೆಯಿಂದ ದೀಕ್ಷೆಗಾಗಿ ಬೇಕಾಗುವ ಸಾಮಾನುಗಳನ್ನು ತೆಗೆದುಕೊಂಡು ಶ್ರೀಮಾತೆಯವರ ಮನೆಗೆ ಬಂದೆ. ಗೌರಿಮಾ ದೀಕ್ಷೆಗೆ ಏನೇನು ಬೇಕು ಎಂಬುದನ್ನು ಮೊದಲೇ ಹೇಳಿದ್ದರು. ಇಂದು ಅವರೂ ಜೊತೆಯಲ್ಲಿ ಬಂದಿದ್ದರು. ಶ್ರೀಮಾತೆ ಆಗ ತದೇಕಚಿತ್ತದಿಂದ ಶ್ರೀರಾಮಕೃಷ್ಣರ ಪೂಜೆ ಮಾಡುತ್ತಿದ್ದಾರೆ. ಸ್ವಲ್ಪ ಸಮಯದ ನಂತರ ನನ್ನನ್ನು ನೋಡಿ ಸಂಜ್ಞೆಯ ಮೂಲಕ ಕುಳಿತುಕೊಳ್ಳು ವಂತೆ ಹೇಳಿದರು. ಪೂಜೆಯ ಅಂತ್ಯದಲ್ಲಿ ಗೌರಿಮಾ ನನ್ನ ದೀಕ್ಷೆಯ ಪ್ರಸ್ತಾಪ ಮಾಡಿದರು (ಇದಕ್ಕೆ ಮೊದಲೇ ನಾನು ಒಮ್ಮೆ ಶ್ರೀಮಾತೆಯವರ ಬಳಿ ಈ ವಿಷಯವಾಗಿ ಮಾತನಾಡಿದ್ದೆ). ನಾನು ಮರ್ತಮಾನ ಬಾಳೆಹಣ್ಣನ್ನು (ಬಾಳೆಹಣ್ಣಿನ ಒಂದು ವಿಧ) ಕೊಂಡೊಯ್ದಿರುವುದನ್ನು ಕಂಡು ಶ್ರೀಮಾತೆಯವರು– "ಓ ನೀನು ಮರ್ತಮಾನ ಬಾಳೆಹಣ್ಣು ತಂದೆಯಾ! ....ಆ ಸಾಧು ಅದನ್ನು ತಿನ್ನುವ ಆಸೆ ವ್ಯಕ್ತಪಡಿಸಿದ್ದ. ಒಳ್ಳೆಯದೇ ಆಯಿತು" ಎಂದರು. ನಂತರ "ಆ ಆಸನವನ್ನು ನನ್ನ ಎಡಗಡೆ ಹಾಸಿ ಕುಳಿತುಕೊ" ಎಂದು ಆದೇಶ ನೀಡಿದರು. ನಾನೆಂದೆ– "ಗಂಗಾಸ್ನಾನ ಇನ್ನೂ ಆಗಿಲ್ಲ." ಶ್ರೀಮಾತೆಯವರು "ಆದರೇನಂತೆ? ಬಟ್ಟೆ ಬದಲಾಯಿಸಿದ್ದೀಯಲ್ಲಾ?" ಸರಿ, ಹತ್ತಿರದಲ್ಲಿ ಕುಳಿತೆ. ಎದೆಯಲ್ಲಿ ಇನ್ನಿಲ್ಲದ ದುಗುಡ. ಕೊಠಡಿಯಿಂದ ಎಲ್ಲರೂ ಹೊರಗೆ ಹೋಗುವಂತೆ ಶ್ರೀಮಾತೆಯವರು ಹೇಳಿದರು. ನಂತರ ನನ್ನನ್ನು ಕೇಳಿದರು, "ಸ್ವಪ್ನದಲ್ಲಿ ಏನನ್ನು ಪಡೆದೆ ಮೊದಲು ಹೇಳು" ಎಂದು. ನಾನು, "ಬರೆದು ತೋರಿಸಲೇ ಅಥವಾ ಬಾಯಲ್ಲಿ ಹೇಳಲೇ?" ಎಂದೆ. ಶ್ರೀಮಾತೆಯವರು ಎಂದರು, "ಬಾಯಲ್ಲೇ ಹೇಳು."

ಶ್ರೀಮಾತೆಯವರು ಮಂತ್ರದೀಕ್ಷೆಯ ಕೊನೆಯಲ್ಲಿ ಸ್ವಲ್ಪ ಹೊತ್ತು ಗಂಭೀರವಾಗಿ ಧ್ಯಾನಸ್ಥರಾಗಿ, ನಂತರ ಕನಸಿನಲ್ಲಿ ನಾನು ಪಡೆದ ಮಂತ್ರದ ಅರ್ಥವನ್ನು ಸ್ವಲ್ಪ ಹೇಳಿದರು. 'ಮೊದಲು ಇದನ್ನು ಜಪಿಸು' ಎಂದು ಹೇಳಿ ಮತ್ತೊಂದು ಮಂತ್ರ ಕೊಟ್ಟು 'ಕೊನೆಯಲ್ಲಿ ಇದನ್ನು ಜಪಿಸಿ ಧ್ಯಾನ ಮಾಡು' ಎಂದು ಆದೇಶಿಸಿದರು. ಮಂತ್ರ ಕೊಡುವ ಸಮಯದಲ್ಲಿ ನನ್ನ ಸಮಸ್ತ ದೇಹ ನಡುಗಲು ಪ್ರಾರಂಭಿಸಿತು. ವಿನಾಕಾರಣ ಅಳಲಾರಂಭಿಸಿದೆ. ಶ್ರೀಮಾತೆ ನನ್ನ ಹಣೆಯ ಮೇಲೆ ದೊಡ್ಡದಾಗಿ ರಕ್ತಚಂದನದ ತಿಲಕವನ್ನು ಇಟ್ಟರು. ಗುರುದಕ್ಷಿಣೆಯ ರೂಪದಲ್ಲಿ ಸ್ವಲ್ಪ ಹಣವನ್ನು ಶ್ರೀಮಾತೆಯವರಿಗೆ ನೀಡಿದೆ. ಅವರು ಗೋಲಾಪ್‌ಮಾಳನ್ನು ಕರೆದು ಅದನ್ನು ಅವರ ಕೈಗಿತ್ತರು. ಧೀರ ಗಂಭೀರ ಮೂರ್ತಿ ಶ್ರೀಮಾತೆಯವರು ಪೂಜಾ ಆಸನದಿಂದ ಎದ್ದು ಹೋಗುವಾಗ, "ನೀನು (ಇಲ್ಲೇ ಕುಳಿತು) ಸ್ವಲ್ಪ ಹೊತ್ತು ಧ್ಯಾನ, ಜಪ ಮತ್ತು ಪ್ರಾರ್ಥನೆ ಮಾಡು" ಎಂದು ನನಗೆ ಹೇಳಿದರು. ಅವರ ಆದೇಶ ಪಾಲನೆಯ ನಂತರ ಶ್ರೀಮಾತೆಯವರಿಗೆ ಮತ್ತೆ ನಮಸ್ಕರಿಸಿದೆ. "ಜೀವನದಲ್ಲಿ ಭಕ್ತಿಯನ್ನು ಪಡೆದುಕೋ" ಎಂದು ಶ್ರೀಮಾತೆ ಆಶೀರ್ವದಿಸಿದರು. ಮನಸ್ಸಿನಲ್ಲೇ ಶ್ರೀಮಾತೆಯವರಿಗೆ ಹೇಳಿದೆ, "ನೋಡಿ, ನಿಮ್ಮ ಮಾತು ನೆನಪಿರಲಿ. ನನಗೆ ಮೋಸ ಮಾಡಬೇಡಿ" ಎಂದು.

ಶ್ರೀಮಾತೆ ಗೋಲಾಪ್‌ಮಾಳ ಜೊತೆ ಗಂಗಾಸ್ನಾನಕ್ಕಾಗಿ ಹೊರಟಿದ್ದಾರೆ. ನಾನೂ ಸಹ ಶ್ರೀಮಾತೆಯವರ ಬಟ್ಟೆ ಮತ್ತು ಅಂಗವಸ್ತ್ರವನ್ನು ತೆಗೆದುಕೊಂಡು ಹೊರಟೆ. ಗಂಗೆಯಲ್ಲಿ ಸ್ನಾನಕ್ಕಾಗಿ ಇಳಿಯುತ್ತಿದ್ದಂತೆ ತುಂತುರು ಹನಿಯಾಗಿ ಮಳೆ ಬರಲಾರಂಭಿಸಿತು. ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲೇ ಶ್ರೀಮಾತೆ ಮೆಟ್ಟಲಿನ ಮೇಲೆ ಕುಳಿತಿದ್ದ ಒಬ್ಬ ಬ್ರಾಹ್ಮಣನಿಗೆ ಒಂದು ಬಾಳೆಹಣ್ಣು, ಒಂದು ಮಾವಿನ ಹಣ್ಣು ಮತ್ತು ಸ್ವಲ್ಪ ಹಣವನ್ನು ಕೊಡುತ್ತಾ ಅವನಿಗೆ "ಹಣ್ಣು ಮತ್ತು ಅದರ ದಾನದ ಫಲ ಎರಡೂ ನಿನಗೇ ಸೇರಿದ್ದು" ಎಂದು ಹೇಳಿದರು. ಓಹ್ ವಿಧಿಯೇ! ಬ್ರಾಹ್ಮಣನು ಇಂದು ಯಾರಿಂದ ದಾನ ಪಡೆದ ಮತ್ತು ಎಷ್ಟು ಅಮೂಲ್ಯವಾದ ಮಾತನ್ನು ಕೇಳಿದ ಎಂಬ ಅರಿವೇ ಅವನಿಗಿಲ್ಲವಲ್ಲ! ನೂರೆಂಟು ಆಸೆಗಳಿಂದ ತುಂಬಿದ ನಾವು ಹೇಗೆ ತಾನೆ ಈ ಮಾತನ್ನು ಅರ್ಥ ಮಾಡಿಕೊಳ್ಳುವೆವು? ಶ್ರೀಮಾತೆ ಬಟ್ಟೆ ಬದಲಾಯಿಸಿ ಒದ್ದೆ ಬಟ್ಟೆ ನನ್ನ ಕೈಗಿತ್ತು "ನಡೆ ಹೋಗೋಣ" ಎಂದು, ನನ್ನ ಮತ್ತು ಗೋಲಾಪ್‌ಮಾ ಮಧ್ಯದಲ್ಲಿ ಹೆಜ್ಜೆ ಹಾಕುತ್ತ ಹೊರಟರು. ಅವರು ತಮ್ಮ ಕೈಯಲ್ಲಿದ್ದ ಚಿಕ್ಕ ತಂಬಿಗೆಯ ನೀರನ್ನು ದಾರಿಯಲ್ಲಿ ಸಿಕ್ಕ ಪ್ರತಿ ಅಶ್ವತ್ಥಮರಕ್ಕೂ ಹಾಕುತ್ತಾ, ನಮಸ್ಕರಿಸುತ್ತ ಮುಂದು ವರಿದರು. ಹೊಸ ಘಾಟ್ (ದುರ್ಗಾಚರಣ ಮುಖರ್ಜಿ ಘಾಟ್) ಇನ್ನೂ ಕಟ್ಟಿರಲಿಲ್ಲವಾದ್ದರಿಂದ ಶ್ರೀಮಾತೆಯವರು ಆ ಸಮಯ ದಲ್ಲಿ ರಾಜ್‌ಘಾಟ್‌ನಲ್ಲಿ ಸ್ನಾನ ಮಾಡುತ್ತಿದ್ದರು. ಗೋಲಾಪ್‌ಮಾ ತಾನು ತಂದಿದ್ದ ಬಿಂದಿಗೆಯ ನೀರನ್ನು ದೇವರ ಮನೆಯಲ್ಲಿ ಇಡಲು ಮೇಲೆ ಹೋದರು. ಶ್ರೀಮಾತೆ ಕೆಳಗೆ ನಲ್ಲಿಯ ಹತ್ತಿರವಿದ್ದ ತೊಟ್ಟಿಯಿಂದ ನೀರನ್ನು ತಂಬಿಗೆಯಲ್ಲಿ ತೆಗೆದು ಕಾಲನ್ನು ತೊಳೆದು "ಕೆಸರುದೆ, ಕಾಲನ್ನು ತೊಳೆದು ಬಾ" ಎಂದು ಹೇಳಿದರು. ನಾನು ನೀರಿಗಾಗಿ ಹುಡುಕುವುದನ್ನು ಕಂಡು "ಆ ತಂಬಿಗೆ ಯಿಂದಲೇ ತೊಳೆದುಕೊ" ಎಂದರು. ನಾನು ಹೇಳಿದೆ, "ನೀವು ಮುಟ್ಟಿದ್ದೀರಿ – ನಾನು ಹೇಗೆ ಅದನ್ನು ಉಪಯೋಗಿಸಲಿ" ಎಂದು. ಶ್ರೀಮಾತೆ "ಸರಿ, ಸ್ವಲ್ಪ ತಲೆಯ ಮೇಲೆ ಚುಮುಕಿಸಿ ಕೊಂಡು ನಂತರ ಉಪಯೋಗಿಸು" ಎಂದರು.

( ಮುಂದುವರಿಯುವುದು )